(ಚಾಮುಂಡೇಶ್ವರಿ ಕ್ಷೇತ್ರದಲ್ಲಿ) ಪಂಚಾಯತಿಗಳ ಅಡಿಯಲ್ಲಿ ಅಕ್ರಮವಾಗಿ ಖಾತೆ ಬದಲಾವಣೆ ಮಾಡಿ ಮಾರಾಟವಾಗಿರುವ ಸೈಟುಗಳು ಎಷ್ಟು; ಎಷ್ಟು ರಿಜಿಸ್ಟರ್ಡ್ ಆಗಿವೆ. ಎಷ್ಟು ಪ್ರೈವೇಟ್ ಡೆವಲಪರ್ಸ್ ಸೊಸೈಟಿಗಳು ಈ ರೀತಿ ಜಮೀನನ್ನು ಕೊಂಡಿದೆ. ಯಾವ ಯಾವ ಪಂಚಾಯತಿಗಳಲ್ಲಿ ಈ ರೀತಿ ಸೈಟುಗಳು ಮಾರಾಟವಾಗಿವೆ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಮೈಸೂರು ನಗರ ಸುತ್ತ ಮುತ್ತ ಬರುವ ಪಂಚಾಯತಿಗಳ ಅಡಿಯಲ್ಲಿ ಒಟ್ಟು 837 ಖಾತೆಗಳನ್ನು ಅಕ್ರಮವೆಂದು ಗುರುತಿಸಲಾಗಿದೆ. ನೋಂದಣಾಧಿಕಾರಿಗಳ ವರದಿಯಂತೆ ಒಟ್ಟು 476 ಖಾತೆಗಳು ನೋಂದಣಿಯಾಗಿರುತ್ತವೆ. (ರಿಜಿಸ್ಟರ್ಡ್). ಖಾಸಗಿ ಡೆವಲಪರ್ಸ್‌ಗಳು ಹಾಗೂ ಸೊಸೈಟಿಗಳು ಜಮೀನನ್ನು ಕೊಂಡಿರುವುದಿಲ್ಲವಾದುದರಿಂದ ಗ್ರಾಮ ಪಂಚಾಯತಿಗಳಲ್ಲಿ ಸೈಟು ಮಾರಾಟವಾಗಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರು ತಾಲ್ಲೂಕಿನಲ್ಲಿ ಟಿ.ಡಿ.ಬಿ. ಆಸ್ತಿಗಳ ವಿವರ.

2353(2931)

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲೂಕಿನಲ್ಲಿ ಹಿಂದಿನ ಟಿ.ಡಿ.ಬಿ.ಈ ಆಸ್ತಿಗಳು ಯಾವುವು?

ಆ) ಅವುಗಳು ಈಗ ಏನಾಗಿವೆ?

ಇ) ಟಿ.ಡಿ.ಬಿ. ಹೋದ ನಂತರ ಅವುಗಳನ್ನು ಯಾವ ಇಲಾಖೆಗೆ ವಹಿಸಲಾಗಿದೆ?

ಈ) ಈಗ ಅವುಗಳನ್ನು ಯಾವ ಉದ್ದೇಶಕ್ಕೆ ಉಪಯೋಗಿಸಲಾಗುವುದು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಮೈಸೂರು ತಾಲ್ಲೂಕಿನಲ್ಲಿ ಹಿಂದಿನ ಟಿ.ಡಿ.ಬಿ.ಯ ಆಸ್ತಿಗಳು ಈ ಕೆಳಕಂಡಂತಿವೆ:

1. ಸಿಬ್ಬಂದಿ ವಸತಿಗೃಹಗಳು - 13

2. ಗ್ರಾಮಸೇವಕರ ವಸತಿಗೃಹಗಳು - 18

3. ಮಹಿಳಾ ಶಿಕ್ಷಕಿಯರ ವಸತಿಗೃಹಗಳು - 6

4. ಪಶುವೈದ್ಯ ಚಿಕಿತ್ಸಾಲಯಗಳು - 5

5. ಕಮ್ಯೂನಿಟಿ ಬಿಲ್ಡಿಂಗ್ಸ್ - 10

6. ಶಿಶುವಿಹಾರಗಳು - 5

7. ಜನತಾ ಮಾದರಿ ಕ್ಯಾಂಟೀನ್ - 1

ಆ) ವಿವರಗಳು ಈ ಕೆಳಕಂಡಂತಿವೆ:

1. ಸಿಬ್ಬಂದಿ ವಸತಿಗೃಹಗಳು (13)- ಹಿಂದೆ ನೌಕರರಿಗೆ ಇದನ್ನು ನೀಡಲಾಗಿದ್ದು, ನಿವೃತ್ತರಾದ ನಂತರ ಲೀಸ್‌ಗೆ ಕೊಡಲಾಗಿದ್ದು, ಈಗ ಅದು ನ್ಯಾಯಾಲಯದಲ್ಲಿದ್ದು ಪ್ರಕರಣ ಅಂತಿಮ ಹಂತದಲ್ಲಿರುತ್ತದೆ.

2. ಗ್ರಾಮಸೇವಕರ ವಸತಿಗೃಹಗಳು (18) - 4 ಕಟ್ಟಡಗಳು ಹೊರತುಪಡಿಸಿ ಉಳಿದವು ಸುಸ್ಥಿತಿಯಲ್ಲಿದ್ದು, ಉಪಯೋಗಿಸಲ್ಪಡುತ್ತಿದೆ.

3. ಮಹಿಳಾ ಶಿಕ್ಷಕಿಯರ ವಸತಿಗೃಹಗಳು (6) - ವಸತಿ ಗೃಹಗಳಾಗಿ ಮುಂದುವರೆದಿವೆ.

4. ಪಶುವೈದ್ಯ ಚಿಕಿತ್ಸಾಲಯಗಳು (5) - ಪಶುವೈದ್ಯ ಚಿಕಿತ್ಸಾಲಯಗಳಾಗಿ ಮುಂದುವರೆದಿವೆ.

5. ಕಮ್ಯೂನಿಟಿ ಬಿಲ್ಡಿಂಗ್ಸ್ (10) - ಸಮುದಾಯ ಭವನಗಳಾಗಿವೆ.

6. ಶಿಶುವಿಹಾರಗಳು (5) ಅಂಗನವಾಡಿಗಳಾಗಿವೆ.

7. ಜನತಾ ಮಾದರಿ ಕ್ಯಾಂಟೀನ್(1) - ಕ್ಯಾಂಟೀನ್ ಆಗಿರುತ್ತದೆ (ಶಿಥಿಲವಾಗಿರುತ್ತದೆ).

ಇ) ಈ ಕೆಳಕಂಡಂತೆ ವಹಿಸಲಾಗಿದೆ:

1. ಸಿಬ್ಬಂದಿ ವಸತಿಗೃಹಗಳು: ಇನ್ನೂ ಪ್ರಕರಣ ಇತ್ಯರ್ಥವಾಗಬೇಕಿರುವುದರಿಂದ ಯಾವ ಇಲಾಖೆಗೂ ವರ್ಗಾಯಿಸಿರುವುದಿಲ್ಲ.

2. ಗ್ರಾಮಸೇವಕರ ವಸತಿಗೃಹಗಳು: ದೇವಲಾಪುರ ಮತ್ತು ಉದ್ದೂರು-

ಕಾವೇರಿ ಗ್ರಾಮೀಣ ಬ್ಯಾಂಕಿಗೆ ನೀಡಿದೆ. ಬೀರಿಹುಂಡಿ- ದೇವಸ್ಥಾನವಾಗಿ ಪರಿವರ್ತಿಸಿಕೊಳ್ಳಲಾಗಿದೆ. 4 ಕಟ್ಟಡಗಳು ಶಿಥಿಲವಾಗಿವೆ, ಉಳಿದ 12 ಕಟ್ಟಡಗಳು ಕೃಷಿ ಸಹಯಕರ ವಸತಿಗೃಹಗಳಾಗಿ ಉಪಯೋಗಿಸಲ್ಪಡುತ್ತಿವೆ.

3. ಮಹಿಳಾ ಶಿಕ್ಷಕಿಯರ ವಸತಿಗೃಹಗಳು: ಗ್ರಾಮ ಪಂಚಾಯತಿಗೆ ವರ್ಗಾಯಿಸಲಾಗಿರುತ್ತದೆ.

4. ಪಶುವೈದ್ಯ ಚಿಕಿತ್ಸಾಲಯಗಳು: ಗ್ರಾಮ ಪಂಚಾಯತಿಗೆ ವರ್ಗಾಯಿಸಲಾಗಿರುತ್ತದೆ.

5. ಕಮ್ಯೂನಿಟಿ ಬಿಲ್ಡಿಂಗ್: ಗ್ರಾಮ ಪಂಚಾಯತಿಗೆ ವರ್ಗಾಯಿಸಲಾಗಿರುತ್ತದೆ.

6. ಶಿಶುವಿಹಾರ: ಗ್ರಾಮ ಪಂಚಾಯತಿಗೆ ವರ್ಗಾಯಿಸಲಾಗಿರುತ್ತದೆ.

7. ಜನತಾ ಮಾದರಿ ಕ್ಯಾಂಟೀನ್: ಯಾರಿಗೂ ವಹಿಸಿರುವುದಿಲ್ಲ.

ಈ) 1. ಸಿಬ್ಬಂದಿ ವಸತಿಗೃಹಗಳು: ವಾಸದ ಮನೆಗಳಾಗಿ ಉಪಯೋಗಿಸಲ್ಪಡುತ್ತಿವೆ.

2. ಗ್ರಾಮಸೇವಕರ ವಸತಿಗೃಹಗಳು - ಕೃಷಿ ಸಹಾಯಕರ ವಸತಿಗೃಹಗಳಾಗಿ ಉಪಯೋಗಿಸಲಾಗುತ್ತಿವೆ.

3. ಮಹಿಳಾ ಶಿಕ್ಷಕಿಯರ ವಸತಿಗೃಹಗಳು: ವಸತಿ ಗೃಹಗಳಾಗಿ ಉಪಯೋಗಿಸಲಾಗುತ್ತಿವೆ.

4. ಪಶುವೈದ್ಯ ಚಿಕಿತ್ಸಾಲಯಗಳು: ಪಶುವೈದ್ಯ ಚಿಕಿತ್ಸಾಲಯಗಳಾಗಿ ಉಪಯೋಗಿಸಲಾಗುತ್ತಿವೆ.

5. ಕಮ್ಯೂನಿಟಿ ಬಿಲ್ಡಿಂಗ್ಸ್: ಸಮುದಾಯ ಭವನಗಳಾಗಿ ಉಪಯೋಗಿಸಲಾಗುತ್ತಿವೆ.

6. ಶಿಶುವಿಹಾರ - ಅಂಗನವಾಡಿಗಳು ನಡೆಯುತ್ತಿರುತ್ತವೆ.

7. ಜನತಾ ಮಾದರಿ ಕ್ಯಾಂಟೀನ್ - ಶಿಥಿಲವಾಗಿರುತ್ತದೆ.

ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಕೇಂದ್ರದಲ್ಲಿ ಹೃದ್ರೋಗ ಪೀಡಿತ ಮಕ್ಕಳಿಗೆ ಉಚಿತ ಚಿಕಿತ್ಸೆ.